Sri K. LAKKAPPA.—Is it not a fact that a number of writ petitions have been filed on account of the non-implementation of inter-state seniority list ?

Sri S. NIJALINGAPPA.—It is not that. It is a question of discontent with one or two individuals that led to the writ petitions.

ಶ್ರೀ ಜೆ. ಎಲ್. ಕಬಾಡಿ.—ಈ ಇರಾಖೆಯಲ್ಲಿ ಸೀನಿಯಾರಿಟಿ ಲಿಸ್ಟನ್ನು ತಯಾರಿಸಿ ಇನ್ನೂ ಸೆಂಟ್ರಲ್ ಗವರ್ನಮೆಂಟಿಗೆ ಕಳುಹಿಸದೇ ಇರುವುದರಿಂದ ಕೋರ್ಟಿಗೆ ಕೆಲವರು ಹೋಗಿರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಯಾರೂ ಕೋರ್ಟಿಗೆ ಹೋಗಿಲ್ಲ.

Sri M. R. PATIL.—Is it not a fact that licentiates in Agriculture of old Mysore are equated with graduates of Science in Agriculture in other areas ?

Sri S. NIJALINGAPPA.—There is an attempt to be made in that way and that is under consideration by the Government.

Sri V. S. PATIL.—Is it not a fact that this delaying is due to some caste prejudices ?

Sri S. NIJALINGAPPA.—My friend evidently does not know. The reason he suggested was something else a minute ago and now he suggests about caste. That is not correct.

ಶ್ರೀ ಜೆ. ಎಲ್. ಕಬಾಡಿ.—ಕೋರ್ಟಿಗೆ ಹೋಗಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತಂದರೆ ಈ ಕೇಸನ್ನು ಬೇಗ ಇತ್ಯರ್ಥ ಮಾಡಲು ಸಾಧ್ಯವೇ.

Sri S. NIJALINGAPPA.—My friend seems to know too much, but not sufficient.

Sri S. SIVAPPA.—Has it come to the notice of the Government that the implementation of the inter-state seniority list is partly responsible for the deterioration of the emotional integration of the State ?

Sri S. NIJALINGAPPA.—No, Sir.

Supply of chemical fertilisers to wet and dry lands of Nanjangud Taluk through Panchayats.

*Q.—398. Sri N. RACHAIAH (Nanjangud).—

Will the Government be pleased to state :—

(*a*) whether in view of the necessity to grow more food in the State, they intend to supply chemical fertilisers to wet and dry lands of Nanjangud Taluk through Panchayats and order the collection of the cost of the same during harvest season just as revenue is collected ;

(*b*) whether they would give instructions to the Agricultural Department to supervise and investigate the growth of crops and to take precautionary measures to prevent the diseases likely to affect the crops?

*A.—Sri G. NARAYANA GOWDA (Minister for Agriculture).—

(*a*) No.

(*b*) Yes, this is being done.

ಶ್ರೀ ಎನ್. ರಾಚಯ್ಯ.—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಆಯಾ ಗ್ರಾಮಪಂಚಾಯತಿಗಳ ಮೂಲಕ ಗೊಬ್ಬರವನ್ನು ಸಪ್ಲೈ ಮಾಡುವುದಕ್ಕೆ ಏಕೆ ಆಗುವುದಿಲ್ಲ ?

ಶ್ರೀ ಜಿ. ನಾರಾಯಣಗೌಡ.—ಈಗಿರುವ ಪದ್ಧತಿಯ ಪ್ರಕಾರ ಸ್ಪೇಟು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಯವರು ತಾಲ್ಲೂಕು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗೆ ಗೊಬ್ಬರ ವನ್ನು ಸಪ್ಲೈ ಮಾಡುತ್ತಾರೆ. ಅವರು ಅನಂತರ ಸರ್ವಿಸ್ಸು ಕೋ-ಆಪರೇಟೀವ್ ಸೊಸೈಟಿಗಳ ಮೂಖಾಂತರ ರೈತರಿಗೆ ಸರಬರಾಜು ಮಾಡುತ್ತಾರೆ.

ಶ್ರೀ ಎನ್. ರಾಚಯ್ಯ.—ಅಲ್ಲಾವಧಿ ಸಾಲ ಕೊಡುವಾಗ ರೈತರಿಗೆ ಕೊಡುವ ಹಣದಲ್ಲಿ ನುಮಾರು ಐವತ್ತು ರೂಪಾಯಿಗಳಷ್ಟು ಹಿಡಿದುಕೊಂಡು ಆ ಪೊಬಲಿಗಿನಷ್ಟು ಬೆರೆಯು ಗೊಬ್ಬರ ವನ್ನು ಸಪ್ಲೈ ಮಾಡುವುದಕ್ಕಾಗುವುದಿಲ್ಲವೇ? ಈಗಿರುವಂತೆ ನೋಡಿದರೆ ಗೊಬ್ಬರ ರೈತರಿಗೆ ಮೂರು ನಾಲ್ಕು ಮೈಲ ದೂರದಲ್ಲರುವವರಿಗೆ ಮಾತ್ರ ಸಿಗುತ್ತದೆ ಇತರರು ಹೆಚ್ಚು ದೂರದಲ್ಲಿದ್ದಾರೆ ಎಂದು ಅವರಿಗೆ ಸಿಕ್ಕದೆ ಅವರ ಫಸಲು ನಷ್ಟವಾಗುತ್ತಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಜೆ. ನಾರಾಯಣಗೌಡ.—ಮಾನ್ಯ ಸದಸ್ಯರ ಸಲಹೆ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಮಾದೇಗೌಡ.—ರಸಾಯನಿಕ ಗೊಬ್ಬರಗಳನ್ನು ಸೊಸೈಟಿಗಳಲ್ಲ ಮಾರುವುದೂ ಅಲ್ಲದೆ ಕೆಲವು ಜನ ಖಾಸಗಿ ವರ್ತಕರಿಗೂ ಲೈಸನ್ಸ್ ಕೊಟ್ಟು ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ನಾರಾಯಣಗೌಡ.—ಖಾಸಗೀ ವರ್ತಕರೂ ಸಹ ಮಾರಾಟ ಮಾಡುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ಖಾಸಗೀ ವರ್ತಕರಿಗೆ ಈ ಗೊಬ್ಬರ ಬ್ಲಾಕು ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಜಿ. ನಾರಾಯಣಗೌಡ.—ಬಂದಿಲ್ಲ. ಅಂತಹ ಯಾವುದಾದರೂ ನಿದರ್ಶನವನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ಅದನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ರಸಾಯನಿಕ ಗೊಬ್ಬರಗಳನ್ನು ಈಗ ಮಾರ್ಕೆಟಿಂಗ್ ಕೋ-ಆಪರೇಟೀವ್ ಸಹಕಾರ ಸಂಘಗಳ ಮೂಲಕ ಹಂಚಬೇಕೆಂದು ಇದ್ದರೂ ಇದರಿಂದ ರೈತರಿಗೆ ಹೆಚ್ಚಿನ ಸೌಲಭ್ಯಗಳು ದೊರಕುತ್ತಿಲ್ಲ. ಆದುದರಿಂದ ಜಿಲ್ಲೆಯಲ್ಲರುವ ವ್ಯವಸಾಯ ಇಲಾಖೆಯ ಮೂಲಕವೇ ಗೊಬ್ಬರವನ್ನು ಹಂಚಲು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಸರಕಾರಕ್ಕೆ ಬಂದಿಲ್ಲವೇ?

ಶ್ರೀ ಜಿ. ನಾರಾಯಣಗೌಡ.—ಇದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಗೊಬ್ಬರ ಸರಬರಾಜು ಮಾಡುವದರಲ್ಲಿ ಎಲ್ಲ ಕಡೆ ಸೊಸೈಟಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವದಿಲ್ಲ. ಆದ್ದರಿಂದ ಗೊಬ್ಬರ ಕೊಡುವುದಕ್ಕೆ ವ್ಯವಸಾಯ ಇಲಾಖೆ ಮುಖಾಂತರ ಏನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ನಾರಾಯಣಗೌಡ.—ಪಂಚಾಯತಿ ಜುರಿಸ್‌ಡಿಕ್ಷನ್ನಲ್ಲಿ ಒಂದೊಂದು ಸೊಸೈಟಿಯು ಇದೆಯೆಂದು ಭಾವಿಸಿ ಆ ಮೂಲಕ ಗೊಬ್ಬರ ಸರಬರಾಜು ಮಾಡಲು ಏರ್ಪಾಡು ಮಾಡಿದೆ. ಪಂಚಾಯತಿ ಜುರಿಸ್‌ಡಿಕ್ಷನ್ನಲ್ಲಿ ಒಂದು ಸೊಸೈಟಿ ಇರುವದರಿಂದ ಆ ಉದ್ದೇಶ ನೆರವೇರುತ್ತದೆ.

ಶ್ರೀ ಜಿ. ಮಾದೇಗೌಡ.—ಮಾರಾಟ ಮಾಡುವದಕ್ಕೆ ಕೊಟ್ಟ ಗೊಬ್ಬರ ದುರುಪಯೋಗವಾಗುವದರಿಂದ ರೈತರಿಗೆ ಸರಿಯಾಗಿ ಗೊಬ್ಬರ ಸಿಕ್ಕುವದಿಲ್ಲ. ಆದ್ದರಿಂದ ಖಾಸಗೀಯವರಿಗೆ ಲೈಸನ್ಸ್ ಕೊಡದೆ ಸೊಸೈಟಿಯ ಮುಖಾಂತರವೇ ಗೊಬ್ಬರ ಮಾರಾಟವಾಗುವದಕ್ಕೆ ಅವಕಾಶವಿರಬೇಕೆಂಬ ದೃಷ್ಟಿಯಿಂದ ಖಾಸಗೀಯವರಿಗೆ ಕೊಟ್ಟಿರುವ ಲೈಸನ್ಸ್ ರದ್ದುಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಜೆ. ನಾರಾಯಣಗೌಡ.—ಖಾಸಗೀಯವರು ಗೊಬ್ಬರ ಸರಬರಾಜು ಯಾರು ಮಾಡುತ್ತಾರೆಯೋ ಅಂಥವರು ಏನಾದರೂ mis-use ಮಾಡಿದ್ದು ಸರಕಾರದ ಗಮನಕ್ಕೆ ಬಂದರೆ ಮಾನ್ಯ ಸದಸ್ಯರು ಹೇಳಿದ ಸಲಹೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—ಸೊಸೈಟಿಗಳು ಸರಿಯಾದ ರೀತಿಯಲ್ಲಿ ಆರ್ಗನೈಜ್ ಆಗಿಲ್ಲವಾದ್ದರಿಂದ ಗೊಬ್ಬರ ಹಂಚುವದಕ್ಕೆ ವ್ಯವಸಾಯ ಇಲಾಖೆಯವರು ಬೇರೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೆ?

ಶ್ರೀ ಜಿ. ನಾರಾಯಣಗೌಡ.—ಸರ್ವಿಸ್ ಕೋ-ಆಪರೇಟಿವ್ ಸೊಸೈಟಿ ವ್ಯವಸ್ಥೆ ಎಲ್ಲ ಆಗಿಲ್ಲವೋ ಅಂಥ ನಂದರ್ಭದಲ್ಲಿ ತಾಲ್ಲೂಕ ಸೊಸೈಟಿ ಮೂಲಕ ಕೊಡಬೇಕೆಂದು ಏರ್ಪಾಡು ಮಾಡಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ಟನ್ ಗೊಬ್ಬರ ಕೊಟ್ಟಿತು, ಪ್ರಾಯೋಗಿಕವಾಗಿ ಕೊಟ್ಟಿರತಕ್ಕಂಥಾದ್ದು ಎಷ್ಟು, ಕೊಟ್ಟಿರತಕ್ಕಂಥ ಗೊಬ್ಬರ ರೈತರಿಗೆ ಕೊಟ್ಟಿದ್ದಾರೆಯೇ? ಇದನ್ನು ಡಿಪಾರ್ಟಮೆಂಟಿನವರು ಚೆಕ್ ಮಾಡುತ್ತಾರೆಯೆ? ಲೈಸನ್ಸ್ ತೆಗೆದುಕೊಂಡ ವರ್ತಕರು ಮತ್ತು ಈ ಸೊಸೈಟಿಗಳು ಒಬ್ಬರಿಗೊಬ್ಬರು ಒಂದು ಅಂಡರ್‌ಸ್ಟಾಂಡಿಂಗ ಮಾಡಿಕೊಂಡು ಅನೇಕ ಕಡೆ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಜಿ. ನಾರಾಯಣಗೌಡ.—ಗಮನಕ್ಕೆ ಬಂದಿಲ್ಲ.

Sri C. J. MUCKANNAPPA.—I rise to a point of order. This particular question pertains only to Nanjangud taluk. We are just roaming all round the State. The question relates to supply of chemical fertilisers to wet and dry lands of Nanjangud taluk.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನನ್ನ ಪ್ರಶ್ನೆ ನಂಜನಗೂಡು ತಾಲ್ಲೂಕಿಗೆ ಮಾತ್ರ ಸಂಬಂಧ ಪಟ್ಟದ್ದು.

Mr. SPEAKER.—Sri Muckanappa has raised very wisely, the wise person that he is, a very interesting point. Before giving a ruling, I would request him to remember that whenever he puts supplementaries. I give a ruling by saying that the explanation given by Sri Revanasiddappa that his supplementary relates to the identical taluk and nothing else, I have to uphold it.

Sri C. J. MUCKANNAPPA.—I never attempted to put a supplementary beyond the scope of the question.

Mr. SPEAKER.—I have said this for the future.

Sri C. J. MUCKANNAPPA.—I have not done it even so far and I don't attempt to do it.

ಶ್ರೀ ಡಿ. ಎಂ. ಸಿದ್ದಯ್ಯ.—ರಾಸಾಯನಿಕ ಗೊಬ್ಬರ ರೈತರಿಗೆ ಸರಿಯಾಗಿ ಸಿಕ್ಕುತ್ತಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಜಿ. ನಾರಾಯಣಗೌಡ.—ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಇ. ನಾರಾಯಣಗೌಡ.—ಬೆಳೆಗಳಿಗೆ ಬರುವ ರೋಗ ತಡೆಗಟ್ಟಲು ಬೆಳೆಗಳಿಗೆ ರೋಗ ಬಂದಾಗ್ಗೆ ಇನ್‌ಸ್ಪೆಕ್ಷನ್ ಮಾಡಲು ಪ್ರತ್ಯೇಕ ಸಿಬ್ಬಂದಿ ಇದೆಯೆ ?

ಶ್ರೀ ಜಿ. ನಾರಾಯಣಗೌಡ.—ಹೌದು ಪ್ರತ್ಯೇಕ ಸಿಬ್ಬಂದಿ ಇದೆ. ಸ್ಟೇಟ್ ಲೆವೆಲ್‌ನಲ್ಲಿ ಲ್ಯಾಂಡ್ ಪಥಾಲಜಿಸ್ಟ್ ಎಂಬ ಅಧಿಕಾರಿಯಿದ್ದಾರೆ. ಜಿಲ್ಲಾ ಹಂತದಲ್ಲಿ ಲ್ಯಾಂಡ್ ಪ್ರೊಟೆಕ್ಷನ್ ಅಸಿಸ್ಟೆಂಟ್ ಇದ್ದಾರೆ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ ಏರಿಯಾ ಲೆವೆಲ್ ವರ್ಕರ್ ಎಂದು ತಾಲ್ಲೂಕ ಮತ್ತು ಹೋಬಳಿ ಹಂತದಲ್ಲಿದ್ದಾರೆ

ಶ್ರೀ ಟಿ. ಡಿ. ದೇವೇಂದ್ರಪ್ಪ.—ಗೊಬ್ಬರ ಮಾರಾಟ ಮಾಡುವುದಕ್ಕೆ ಸರ್ಪಿನ್ ಕೋ-ಆಪರೇಟಿವ್ ಸೊಸೈಟಿಗೆ ಲೈಸನ್ಸ್ ಸಿಕ್ಕದೇ ಇರತಕ್ಕಂಥ ಸಂದರ್ಭ ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಜಿ ನಾರಾಯಣಗೌಡ.—ಇಲ್ಲ. ಅಂಥಾದ್ದು ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರೈತರಿಗೆ ಗೊಬ್ಬರ ಹಂಚಿದ್ದಾರೆಯೇ ಇಲ್ಲವೇ ಎನ್ನುವದನ್ನು ಕಂಡುಹಿಡಿಯಲು ಚೆಕಿಂಗ್ ಪದ್ಧತಿ ಏನಾದರೂ ಇದೆಯೆ ?

ಶ್ರೀ ಜಿ. ನಾರಾಯಣಗೌಡ.—ಆಡಿಟ್ ಮಾಡುತ್ತಾರೆ.

ಶ್ರೀ ಬಿ. ಎಲ್. ಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಸಂಚಾರಿ ಯುನಿಟ್ಸ್ ಸ್ಥಾಪನೆ ಮಾಡಿ ಒಂದು ವ್ಯಾನ್ ಇಡುವ ಬಗ್ಗೆ ಸರಕಾರ ಯೋಚನೆ ಮಾಡುವುದೇ ?

ಶ್ರೀ ಜಿ. ನಾರಾಯಣಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿ ಆ ರೀತಿ ಸ್ಥಾಪನೆ ಮಾಡುವ ಯೋಚನೆ ಇಲ್ಲ. ಆದರೆ ಒಂದು ವ್ಯಾನ್ ಇಟ್ಟುಕೊಂಡು ರೈತರಿಗೆ ತಿಳುವಳಿಕೆ ಕೊಡುವ ಬಗ್ಗೆ ಸರಕಾರ ಪರಿಶೀಲನೆ ಮಾಡಲಿದೆ.

ಶ್ರೀ ಜಿ. ಮಾದೇಗೌಡ.—ಗೊಬ್ಬರ ಸರಬರಾಜು ಗ್ರಾಮಪಂಚಾಯತಿ ಸಹಕಾರಿ ಸಂಘಗಳ ಮುಖಾಂತರ ಮಾರಾಟವಾಗಬೇಕು ಎಂದು ಇರುವಾಗ್ಗೆ ಖಾನಗಿ ವರ್ತಕರಿಗೆ ಗೊಬ್ಬರ ಮಾರಾಟ ಕ್ಕಾಗಿ ಲೈಸನ್ಸ್ ಕೊಡುವುದು ಏತಕ್ಕೆ ?

ಶ್ರೀ ಜಿ. ನಾರಾಯಣಗೌಡ —ಸ್ವಾಮಿ, ರಾಸಾಯನಿಕ ಗೊಬ್ಬರ ವ್ಯಾಪಾರ ಪಬ್ಲಿಕ್ ಸೆಕ್ಟರ್ ಮುಖಾಂತರ ಮಾಡುವದಲ್ಲದೆ ಪ್ರೈವೇಟ್ ಸೆಕ್ಟರ್ ಸಹ ಎನ್‌ಕರೇಜ್ ಮಾಡಬೇಕೆಂಬ ನೀತಿಯಿದೆ. ಆ ನೀತಿಗೆ ಅನುಸಾರವಾಗಿ ಎನ್‌ಕರೇಜ ಮಾಡಬೇಕಾಗುತ್ತದೆ.

ಶ್ರೀ ಎಸ್. ಎ. ಪಾಣ್ಣೇಕಟ್ಟೆ.—ರಾಸಾಯನಿಕ ಗೊಬ್ಬರ ಹಂಚುವಾಗ್ಗೆ food cropಗೆ ಇಷ್ಟು ಕೊಡಬೇಕು non-food cropಗೆ ಇಷ್ಟು ಕೊಡಬೇಕು ಎಂದು ನಿಗದಿ ಮಾಡಿ ನಿರ್ದೇಶ ಏನಾದರೂ ಹಾಕಿದ್ದೀರಾ ?

ಶ್ರೀ ಜಿ. ನಾರಾಯಣಗೌಡ.—ಇಲ್ಲ.

ಶ್ರೀ ಎನ್. ಎ. ವಾನಣ್ಣಶೆಟ್ಟ.—ಸೊಸೈಟಿಯಿಲ್ಲದೇ ಇರತಕ್ಕ ಕಡೆ ಪಂಚಾಯತಿಯವರಿಗೆ ಗೊಬ್ಬರ ಹಂಚಲು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ನಾರಾಯಣಗೌಡ.—ಈ ಮೊದಲೇ ಹೇಳಿದ ಹಾಗೆ ಪಂಚಾಯತಿ ಹಂತದಲ್ಲಿ ಕೋ-ಆಪರೇಟಿವ್ ಸೊಸೈಟಿ ಇಲ್ಲವೆ ತಾಲ್ಲೂಕ ಮಾರ್ಕೆಟಿಂಗ ಸೊಸೈಟಿ ಮಾರಾಟ ಮತ್ತು ನರಬರಾಜು ಮಾಡುವ ಏರ್ಪಾಡು ಮಾಡಿದೆ.

ಶ್ರೀ ಶರಣಪ್ಪ.—ಹಳ್ಳಿಗಳಲ್ಲಿ ಈಗ ನರ್ವಿಸ್ ಕೋ-ಆಪರೇಟಿವ್ ಸೊಸೈಟಿ ಸದಸ್ಯರು ಮಾರ್ಕೆಟಿಂಗ ಸೊಸೈಟಿ ಸದಸ್ಯರು ಆಗಿದ್ದಾರೆ. ಆದ್ದರಿಂದ ಗೊಬ್ಬರ ನರಬರಾಜು ಎಲ್ಲ ಪಬ್ಲಿಕ್ ಸೆಕ್ಟರ ಮೂಲಕ ಮಾಡಲು ನರಕಾರ ಗಮನ ಕೊಡುತ್ತದೆಯೆ?

ಶ್ರೀ ಜಿ. ನಾರಾಯಣಗೌಡ.—ಇದನ್ನು ಕೇಂದ್ರ ನರಕಾರ ಏರ್ಪಾಡು ಮಾಡಿದ್ದಾರೆ. ಲೈಸನ್ಸ್ ಕೊಡುವದನ್ನು ಒಂದು ನಿಬಂಧ ಪ್ರಕಾರ ಕೊಡಬಾಗುತ್ತದೆ. ಕೋ-ಆಪರೇಟಿವ್ ಸೊಸೈಟಿಯವರು ನಹ ಪಂಚಾಯತಿ ಹಂತದಲ್ಲಿ ಲೈಸನ್ಸ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನರ್ವಿಸ್ ಕೋ-ಆಪರೇಟಿವ್ ಸೊಸೈಟಿಯ ಮುಖಾಂತರ ಗೊಬ್ಬರ ನರಬರಾಜು ಮಾಡಬೇಕೆಂದು ನರಕಾರ ಒಪ್ಪಿಕೊಂಡಿರುವದರಿಂದ ನಂಜನಗೂಡು ತಾಲ್ಲೂಕಿನಲ್ಲಿ ಅಂಥ ಸೊಸೈಟಿಗಳು ಇಲ್ಲದೇ ಇರತಕ್ಕಂಥ ಸ್ಥಳದಲ್ಲಿ ತಾಲ್ಲೂಕ ಸೊಸೈಟಿ ಎಜೆಂಟ ಮುಖಾಂತರ ನರಬರಾಜು ಮಾಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಜಿ. ನಾರಾಯಣಗೌಡ.—ಅಡ್ಡಿಯಿಲ್ಲ ಏರ್ಪಾಡು ಮಾಡುತ್ತೇವೆ.

ಕೆ. ಎಚ್. ರಂಗನಾಥ್.—ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಕೋ-ಆಪರೇಟೀವ್ ಸೊಸೈಟಿಗಳಿವೆ ಮತ್ತು ಎಷ್ಟು ಪ್ರೈವೇಟ್ ಜನಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ?

ಶ್ರೀ ಜಿ. ನಾರಾಯಣಗೌಡ.—ಆ ವಿವರಗಳಿಲ್ಲ.

ಶ್ರೀ ಬಿ. ಚನ್ನಬೈರೆಗೌಡ.—ಮದ್ರಾಸು ಮತ್ತು ಆಂಧ್ರ ಪ್ರದೇಶಕ್ಕೆ ನಾರಾಯಿ ಮಾಡಿಕೊಳ್ಳುವುದಕ್ಕೋಸ್ಕರ ಸೊಸೈಟಿಗಳ ಮೂಲಕ ಮೋನದಿಂದ ಸ್ಪಿರಿಟ್ ಮಾರಾಟ ಮಾಡುವುದು ನರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ನಾರಾಯಣಗೌಡ.—ಇಲ್ಲ.

ಶ್ರೀ ಎಂ. ಸಿ. ಬನಪ್ಪ.—ಈಗತಾನೇ ಮಂತ್ರಿಗಳು ಹೇಳಿದರು: food-crop, non-food crop ಎಂಬ ನಿರ್ಭಂಧವಿಲ್ಲ ಎಂದು. Food cropಗೆ ಮಾತ್ರ ಕೊಡಬೇಕು ಅಂತ circular instructions ಇಲ್ಲವೇ?

ಶ್ರೀ ಜಿ. ನಾರಾಯಣಗೌಡ.—ಇದು food-crop ಮತ್ತು commercial-cropಗೆ ಸಹಿತ ಕೊಡಬೇಕು ಅಂತ ಇದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಸೊಸೈಟಿಗಳು ಇಲ್ಲದೆ ಇರುವ ಕಡೆ ಪಂಚಾಯತಿಗಳ ಮೂಲಕ ಮಾರುವುದಕ್ಕೆ ತೊಂದರೆ ಏನು?

ಶ್ರೀ ಜಿ. ನಾರಾಯಣಗೌಡ.—ಇದರಲ್ಲಿ ಒಂದು ತಿಳಿದುಕೊಳ್ಳಬೇಕು. ಎಲ್ಲಾ ಪಂಚಾಯತಿಗಳೂ ಮುಂದೆ ಬರುವುದಿಲ್ಲ. ಈ ಒಂದು ಪದ್ಧತಿಯನ್ನು ಅನುನರಿಸಿದ ಮೇಲೆ ನಾರ್ವತ್ರಿಕವಾಗಿ ದೇಶದಲ್ಲೆಲ್ಲಾ ಆ ಪದ್ಧತಿಯನ್ನು ಅನುನರಿನಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಕೋ-ಆಪರೇಟೀವ್ ಸೊಸೈಟಿ ಎಲ್ಲಿ ಇಲ್ಲವೋ, ಅಲ್ಲಿಗೆ ಪಕ್ಕದ ಸೊಸೈಟಿಯಿಂದ ನರಬರಾಜು ಮಾಡುತ್ತಾರೆ. ಆದರಿಂದ ತೆಗೆದುಕೊಳ್ಳಬಹುದಲ್ಲಾ, ಏನು ತೊಂದರೆ ಇದೆ?

ಶ್ರೀ ಎಸ್. ರಾಚಯ್ಯ.—ತಮ್ಮ ಅಧಿಕಾರಿಗಳು ರೋಡ್‌ಸೈಡ್ 1-2 3 ಮೈಲಿ ಇದ್ದರೆ ಹೋಗುತ್ತಾರೆಯೇ ಏನ, ಇನ್ನೂ ಹೊರಗಡೆ ದೂರವಿರುವ ಒಳಪ್ರದೇಶಗಳಿಗೆ ಹೋಗಿ ರೈತರು ಕಷ್ಟನುಖಗಳನ್ನು ಹೇಳಿದ್ದನ್ನು, ಹೈರುಗಳು ಕೆಟ್ಟುಹೋಗುತ್ತಿವೆಯೆಂದು ಹೇಳಿದ್ದನ್ನು ಕೇಳುವುದಿಲ್ಲ. ಅವರ ಕುಂದುಕೊರತೆಗಳ ಕಡೆ ಗಮನ ಕೊಡುವುದಿಲ್ಲ. 10-15-20 ಮೈಲಿಯಿಂದ ಬಂದವರು ನಿರಾಶರಾಗಿ ಹಿಂತಿರುಗುತ್ತಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಇದು ಮುಂಚೆ ಕೇಳಿದಿರಿ, ಇದೂ identical.

ಶ್ರೀ ಎ. ಎಂ. ದೇವ್.—Precautionary measures are being taken to prevent the diseases likely to affect the crops ಅಂತ ಹೇಳಿದ್ದೀರಿ. ಹೀಗೆ ಮಾಡಬೇಡಿ. ನಾಮೂಹಿಕವಾಗಿ spray ಮಾಡಬೇಕು. ಈ ದೃಷ್ಟಿಯಿಂದ mobile sprayer ಅನ್ನು ಡಿನ್ಟ್ರಿಕ್ಟ್‌ಗೆ ಒಂದು ಕೊಡದೆ ಹೋದರೆ ಮಾಡುವುದಕ್ಕಾಗುವುದಿಲ್ಲ ಅನ್ನುವುದು ನರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ನಾರಾಯಣಗೌಡ.—ಮೊಬೈಲ್ ಸ್ಪ್ರೇಯರುಗಳನ್ನು ಕೊಟ್ಟು ಇದನ್ನು ಮಾಡುವುದಕ್ಕೆ ಅನೇಕ ನಂದರ್ಭಗಳಲ್ಲಿ ನಾಧ್ಯವಾಗುವುದಿಲ್ಲ. ಈಗ ಸ್ಪ್ರೇಯರುಗಳಿಗೋನ್ಕರ ರೈತರುಗಳಿಗೆ ಶೇಕಡ 50 ರಷ್ಟು ನಬ್‌ಸಿಡಿ ಕೊಟ್ಟು ಅವರುಗಳಿಗೆ ಒದಗಿನುತ್ತಾ ಇದ್ದೇವೆ. ಪವರ್ ಸ್ಪ್ರೇಯರು

ಗಳನ್ನು ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳಿಂದ ಪ್ಲಾಂಟ್ ಪ್ರೊಟೆಕ್ಷನ್ ಆಸಿಸ್ಟೆಂಟರು ಒದಗಿಸುತ್ತಾರೆ. ಅವರ ಮೂಲಕ ಪ್ರಯೋಜನ ಹೊಂದಬಹುದು.

Major and Minor Tanks in Sorab and Sagar Taluks.

*Q. 340. Sri V. S. LAKSHMIKANTAPPA (Sagar).—

Will the Government be pleased to state :—

(*a*) the number of major tanks and minor tanks in Sorab and Sagar Taluks, separately ;

(*b*) the names of such major tanks with extent of achkat under them that have been sanctioned for reconstruction of sluices and restoration work in the said taluks (figures for the two taluks may be furnished separately) ?

A.—Sri ALUR HANUMANTHAPPA (Deputy Minister for Minor Irrigation).—

		Major	*Minor*
(*a*) (i) Sorab	...	176	1,152
(ii) Sagar Taluk	...	62	1,169

(*b*) *Vide* statement given below :

List showing the names of Major Tanks with extent of Atchkat that have been sanctioned for reconstruction of sluice and restoration work.

SORAB TALUK

Sl. No.	Name of Taluk	Extent of Atchkat	Remarks
1	2	3	4
1	Restoration of Urumundina Thumbekere Ulavi Hobli Reg. No. 513.	121·26	
2	Restoration of Doddakere or Urumundinakere and Chickkere Hiresave Reg. No. 915.	121·01	
3	Restoration of Kolakanakere or Kuntakkatte Hiresave Reg. No. 918.	29·20	
4	Restoration of Doddakere Gangavalli Reg. 311 ...	101·38	
5	Restoration of Hithalakere Hiremagadi Reg. No. 389	103·25	
6	Restoration of Doddakere Ginivala Reg. No. 317 ...	92·16	
7	Restoration of Hanchi Thavarekatte Reg. No. 373 ...	114·02	
8	Restoration of Thotadakere Kamanavally (Yennekoppa) Reg. No. 308.	196·03	
9	Restoration of Basthikattekere Hirechowthi Reg. No. 398.	173·36	